ನಂಬರ್.	ಫಾರೆಸ್ಟ್ ವ ಪ್ಲಾಂಟೇಷ್ಣ.		ತಾಲ್ಲೂಕು.
1	ಸಾವೆಂದುರ್ಗ	ಸ್ಟೇಟ್ ಫಾರೆಸ್ಟ್	ಮಾಗಡಿ
2	ಮಾಕಳಿ	ಡಿಟೋ	ಕ್ಲೋಸ್‌ಪೇಟೆ
3	ಮಣ್ಣುಗುಡ್ಡೆ	ಡಿಟೋ	ಡಿಟೋ
4	ಟೀಲಂದಾಡಿ	ಡಿಟೋ	ಕಾರ್ಕಾರ್‌ಹಳ್ಳಿ
5	ಬಸವನಬೆಟ್ಟ	ಡಿಟೋ	ಡಿಟೋ
6	ರಾಗಿಹಳ್ಳಿ	ಡಿಟೋ	ಡಿಟೋ
7	ಬಿಳಿಕಲ್	ಡಿಟೋ	ಡಿಟೋ
8	ಕುಂಬಳಗೂಡು	ಡಿಟೋ	ಕ್ಲೋಸ್‌ಪೇಟೆ
9	ಹುಳತಾರ್	ಡಿಟೋ	ಡಿಟೋ
10	ಹಂದಿಗುಂದಿ	ಡಿಟೋ	ಡಿಟೋ
11	ಕಬ್ಬಾಳ್	ಡಿಟೋ	ಕಾರ್ಕಾರ್‌ಹಳ್ಳಿ
12	ದೊಡ್ಡಬಳ್ಳಾಪುರ	ಡಿಟೋ	ದೊಡ್ಡಬಳ್ಳಾಪುರ
13	ಮುಗ್ಗುರು	ಡಿಟೋ	ಕಾರ್ಕಾರ್‌ಹಳ್ಳಿ
14	ಬಾಣಂತಿವಾರಿ	ಡಿಟೋ	ಡಿಟೋ
15	ತೆಂಗಿನಕಲ್	ಡಿಟೋ	ಕ್ಲೋಸ್‌ಪೇಟೆ
16	ಅರಕಾವತಿ	ಪ್ಲಾಂಟೇಷ್ಣ	ನೆಲವಂಗಲ
17	ಬೊಮ್ಮನಹಳ್ಳಿ ಬೈರಕಟ್ಟಹಳ್ಳಿ	ರೆವಿನ್ಯೂಪ್ಲಾಂಟೇಷ್ಣ	ಡಿಟೋ
18	ದೊಡ್ಡಬೆಲೆ	ಫಾರೆಸ್ಟ್ ಪ್ಲಾಂಟೇಷ್ಣ	ಡಿಟೋ
19	ಮುದಗೆರೆ	ಪ್ಲಾಂಟೇಷ್ಣ	ಕ್ಲೋಸ್‌ಪೇಟೆ
20	ವೃಷಭಾವತಿ	ಡಿಟೋ	ಬೆಂಗಳೂರು

ಪ್ರತಿ ವರುಷ ಬಿಸಲುಕಾಲ ಅಂದರೆ ಫಿಬ್ರವರಿ ಗುರ್ಯೇ ಲಾಗಾಯತು ಮೇ 31ರ ವರಿಗೆ ಮೇಲ್ಕಂಡ ಅಪ್ಪಣೆ ಕೊಡಲ್ಪಡುವದಿಲ್ಲವು.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

1890ನೇ ಇಸವಿ ಅರ್ಜೀ ನಂಬರ್ 14.

ಬೆಂಗಳೂರು ಮಾವಹಳ್ಳಿಲಿ ಯಿದ್ದು ಮೃತಪಟ್ಟ ನರಸುಂಹ್ಮಣ್ಣನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಹನುಮಪ್ಪ, ಮೃತಪಟ್ಟ ಸದರೀ ನರಸುಂಹ್ಮಣ್ಣನಿಗೆ ಅಂಣ ಆಗಬೇಕೆಂಬ ಹಕ್ಕುದಾರಿ ಮೇಲೆ ಮಾವಹಳ್ಳಿ ಸ್ಥಳದ ಹನುಮಪ್ಪನು ಮಾವಹಳ್ಳಿ ವಾಸಸ್ಥನಾಗಿ ಮೃತಪಟ್ಟ ನರಸುಂಹ್ಮಣ್ಣನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಹನುಮಪ್ಪನ ಅರ್ಜಿಯನ್ನು 1890ನೇ ಇಸವಿ ಫಿಬ್ರವರಿ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನರಸುಂಹ್ಮಣ್ಣನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1890ನೇ ಇಸವಿ ಜನವರೀ ತಿಂಗಳು 24ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಲ್. ಅನಂತಸ್ವಾಮಿರಾವ್,
ಸಬ್ ಜಡ್ಜ್.

ಕೋಲಾರ ಡಿಸ್ಟ್ರಿಕ್ಟ್

ತಾಂ|| 21ನೇ ಜನವರಿ 1890.

ಇದರಿಂದ ಸಕಲ ಜನಗಳಿಗೂ ತಿಳಿಯಪಡಿಸುವದೇನಂದರೆ, ಸ್ ಸ್ 1878ನೇ ಇಸವಿ ಜೂ|| 8ನೇ ತಾರೀಖಿನ ಫಾರೆಸ್ಟ್ ರೂಲ್ಸ್ 13ನೇ ಸೆಕ್ಷನ್ ಅನುಸರಿಸಿ ಈ ಕೆಳಗೆ ನಮೂದಿಸಿ ಇರುವ ಫಾರೆಸ್ಟ್ ಮತ್ತು ಪ್ಲಾಂಟೇಷ್ಣಗಳು 1890ನೇ ಇಸವಿ ಫಿಬ್ರವರಿ ಗುರ್ಯೇ ಲಾಗಾಯತು ಜೂ|| ಆಖೈರ್ ವರಿಗಿನ ಬಿಸಲು ಕಾಲದಲ್ಲಿ ಬಂದ್ ಮಾಡಲ್ಪಟ್ಟಿರುತ್ತದೆ.

2. ಈ ಮೇಲ್ಕಂಡ ಅಯಾಮಿನಲ್ಲಿ ಯಾವ ವಿಧವಾದ ಸಿಕಾರಿಯೂ ನಿರೋಧಿಸಲ್ಪಟ್ಟಿರುತ್ತದೆ. ಅತಿಕ್ರಮಪ್ರವೇಶ ಮಾಡುವವರು ಪೊಸಿಕ್ಯೂಷ್ಣಗೆ ಒಳಪಟ್ಟಾರು

3. ಫಾರೆಸ್ಟ್ ಮತ್ತು ಪ್ಲಾಂಟೇಷ್ಣಗಳಲ್ಲಿ ಈಗ ದನಗಳು ಮೇಯಿಸುವದಕ್ಕೆ ಅಪ್ಪಣೆ ಪಡದಿರತಕ್ಕಂತ ರೈತರುಗಳು ಹುಲ್ಲಿಗೆ ಬೆಂಕಿ ಹಾಕುವದನ್ನ ನಿರೋಧಿಸಿ ಇರುವದಲ್ಲದೆ ಫಾರೆಸ್ಟ್ ವ ಪ್ಲಾಂಟೇಷ್ಣಗಳಲ್ಲಿ ಬೆಂಕಿ ಬೀಳುವದನ್ನ ಅಡ್ಡಿ ಪಡಿಸುವದಕ್ಕು ಮತ್ತು ಆರಿಸುವದಕ್ಕು ಸಹ ತಕ್ಕ ಕುಮ್ಮಕ್ಕು ಕೊಡಬೇಕು

ನಂ.	ಫಾರೆಸ್ಟ್ ವ ಪ್ಲಾಂಟೇರ್ಷಗಳ ಹೆಸರು.	ತಾಲ್ಲೂಕು.
1	ನಂದಿ ಸ್ಟೇಟ್ ಫಾರೆಸ್ಟ್	ಚಿಕ್ಕಬಳ್ಳಾಪುರ
2	ಸುಲಾಲಪ್ಪನ ದಿನ್ನೆ ಪ್ಲಾಂಟೇರ್ಷ	ಡಿಟೋ
3	ಗವಲರ್ಕಾಹಳ್ಳಿ ಪ್ಲಾಂಟೇರ್ಷ	ಡಿಟೋ
4	ನರಸಿಂಹ್ಮದೇವರಬೆಟ್ಟ ಫಾರೆಸ್ಟ್	ಚಿಕ್ಕಬಳಾಪುರ ಗೋರಿಬಿದನೂರು ತಾಲ್ಲೂಕುಗಳು ಮತ್ತು ಗುಡಿಬಂಡೆ ಸಬ್ ತಾಲ್ಲೂಕು
5	ಶ್ರೀನಿವಾಸಪುರ ಮತ್ತು ಯಳಂದೂರು ಜಂಗಲ್‌ಗಳು	ಮುಳಬಾಗಲ್ ತಾ|| ಮತ್ತು ಶ್ರೀನಿವಾಸಪುರ ಸಬ್ ತಾಲ್ಲೂಕು
6	ರಾಯಲ್‌ಪಾಡ್ ನೆಲವಂಕಿ ಮತ್ತು ಅಡ್ಡಗಲ್ ಜಂಗಲ್‌ಗಳು	ಚಿಂತಾಮಣಿ ತಾ|| ಮತ್ತು ಶ್ರೀನಿವಾಸಪುರ ಸಬ್ ತಾಲ್ಲೂಕು
7	ಚಿರುವನಹಳ್ಳಿ ಅಂಜಗಾನಹಳ್ಳಿ ಮತ್ತು ಹೊಸೂರು ಪೂಜೆ ಕಾಮಸಂದ್ರ ಜಂಗಲ್‌ಸಳು	ಶ್ರೀನಿವಾಸಪುರ ಸಬ್ ತಾಲ್ಲೂಕು
	ಗಾಜಲ್‌ದಿನ್ನೆ ಮತ್ತು ಸಂಗೊಂಡಹಳ್ಳಿ ಪ್ಲಾಂಟೇರ್ಷಗಳು	ಬೌರಿಂಗ್‌ಪೇಟೆ ಮತ್ತು ಮಾಲೂರು ತಾಲ್ಲೂಕುಗಳು
	ಪೊಪ್ರೀನಹಳ್ಳಿ ತಿರುಮಲಯ್ಯನ ದಿನ್ನೆ, ಗೋರಿನುಡಗು ಮತ್ತು ಚವ್ವಡಸಂದ್ರ ಪ್ಲಾಂಟೇರ್ಷಗಳು	ಕೋಲಾರ ತಾಲ್ಲೂಕು
	ಬೀಜೆಗಾನಹಳ್ಳಿ ಪ್ಲಾಂಟೇರ್ಷ	ಶಿಡ್ಲಘಟ್ಟ ತಾಲ್ಲೂಕು
	ಮಾಲ್ಲೂರು ಪ್ಲಾಂಟೇರ್ಷ	ಗುಡಿಬಂಡೆ ಸಬ್ ತಾಲ್ಲೂಕು
		ಮಾಲೂರು ತಾಲ್ಲೂಕು.

ಕೆ. ರಾವಜಚಂದ್ರರಾವ್,
ಫಾರ್ ಡೆಪ್ಯುಟಿ ಕಮ್ಮಿಷನರ್.

ತುಮಕೂರು ಡಿಸ್ಟ್ರಿಕ್ಟ್

ತಾರೀಖು 27ನೇ ಜನವರಿ 1890.

ಗುಬ್ಬಿ ಕುಣಿಗಲ್ ಸಬ್ ರಿಜಿಸ್ಟ್ರೀ ಆಫೀಸಿನಲ್ಲಿ ಈ ಕೆಳಗೆ ವಿವರಿಸಿ ಯಿರುವ ದಸ್ತಾವೇಜಿಗೆ ಸಂಬಂಧಪಟ್ಟವರೇ ಆಗಲಿ ಆಥವಾ ಕ್ರಮಪ್ರಕಾರ ಅಧಿಕಾರ ಪಡೆದ ಮುಖತ್ಯಾರ್‌ಕರೆ ಆಗಲಿ ಈ ತಾರೀಖು ಲ.ಗಾಯಿತು ಬಂದು. ತಿಂಗಳ ವಳಗಾಗಿ ವಾಪಸ್ ಪಡಿಯಲು ತಪ್ಪಿದಲ್ಲಿ, 1877ನೇ ಇಸವಿ ಇಂಡ್ಯೂ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಮೇರೆ ನಾಶ ಪಡಿಸಲ್ಪಡುವದು.

ನಂಬರ್.	ದಸ್ತಾವೇಜನ್ನ ಬರದುಕೊಟ್ಟವರ ಹೆಸರು.	ದಸ್ತಾವೇಜನ್ನ ಬರಸಿಕೊಂಡವರ ಹೆಸರು.	ದಸ್ತಾವೇಜಿನ ತಾರೀಖು.	ರಿಜಿಸ್ಟರ್ ಆದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
119 1887—88	ಗುಬ್ಬಿ ತಾಲ್ಲೂಕು ಚಿಟ್ಟನಹಳ್ಳಿ ಗ್ರಾಮದ ರುದ್ರಯ್ಯನ ಹೆಂಡತಿ ಪುಟ್ಟಮ್ಮ	ಗುಬ್ಬಿ ತಾಲ್ಲೂಕು ಚಿಟ್ಟನಹಳ್ಳೀಯಲ್ಲಿ ಇರುವ ಚನ್ನಪ್ಪನವರ ಮಗ ಹೊಸಪ್ಪಯ್ಯ	1887ನೇ ಇಸವಿ ನವೆಂಬರ್ ತಾರೀಖು 19	1887ನೇ ಇಸವಿ ನವೆಂಬರ್ ತಾರೀಖು 19	ಐವತ್ತು ರೂಪಾಯಿ ತೆಗದುಕೊಂಡು ಚಿಟ್ಟನಹಳ್ಳಿ ವೇಟೇಯಲ್ಲಿರುವ ಸಾಳು ನಿವೇಶನವನ್ನ ಭೋಗ್ಯಮಾಡಿ ಕೊಟ್ಟರುವದಾಗಿ ವಗೈರೆ
ಡಿಟೋ	ಕುಣಿಗಲ್ ತಾಲ್ಲೂಕು ಅಮೃತೂರಿನಲ್ಲಿರುವ ಶೇತಾರಾಮಯ್ಯ ಇವನ ಮಗ ಲಕ್ಷ್ಮೀನರಸಯ್ಯ	ಮೈಸೂರು ಡಿಸ್ಟ್ರಿಕ್ಟು ನಂಜನಗೂಡಿನಲ್ಲಿರುವ ಅಮೃತೂರು ವೆಂಕಟನಾರಣಪ್ಪನವರು	1886ನೇ ಇಸವಿ ಡಿಸೆಂಬರ್ ತಾರೀಖು 4	ರಿಜಿಸ್ಟ್ರೇಷನ್ ನಿರಾಕರಿಸಲ್ಪಟ್ಟ ದಿ 31ನೇ ಮಾರ್ಚ 1887	ಐವತ್ತು ರೂಪಾಯಿಗೆ ಅಮೃತೂರಲ್ಲಿ ರುವ ತಮ್ಮ ಖಾಲಿ ನಿವೇಶನವನ್ನ ಆಧಾ ಮಾಡಿರುವದಾಗಿ ವಗೈರೆ.

ಸಿ. ಕ್ರೈಸ್,
ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರಯವರ ಕೋರ್ಟ್‌ನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 329.

ಮೃತಪಟ್ಟ ವಾಯಲ್‌ವಾಡು ವೆಂಕೋಬರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಕೃಷ್ಣರಾಯ ಮೈನರ್ ಗಾರ್ಡಿಯರ್ ತಾಯಿ ಜೀವೂಬಾಯಿ ಮೃತಪಟ್ಟ ಸದರಿ ವೆಂಕೋಬರಾಯರಿಗೆ ಮಗ ಹೆಂಡತಿ ಅಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಹಳೇ ಅಗ್ರಹಾರ ಸ್ಥಳದ ಸದರೀ ಜೀವೂಬಾಯಿರು ಸದರಿ ವಾಸಸ್ಥರಾಗಿ ಮೃತಪಟ್ಟ ವೆಂ